# ಇಸ್ಲಾಮೀ ಸಂಸ್ಕೃತಿಯ ಆರ್ಥಿಕ ಮಗ್ಗುಲು

ಸಂಪತ್ತು ಜೀವನದ ಅವಶ್ಯಕತೆಗಳಲ್ಲಿ ಒಂದಾಗಿದೆ. ಅಲ್ಲಾಹನು ಸಂಪತ್ತನ್ನು ಮಾನವನ ಜೀವನ ಮತ್ತು ಅವನ ಸ್ಥಿರತೆಗಾಗಿ ಒಂದು ಮಾಧ್ಯಮವನ್ನಾಗಿ ಮಾಡಿದ್ದಾನೆ. ಅಲ್ಲಾಹನು ಅದನ್ನು ಮಾನವ ಜೀವನದ ಸೌಂದರ್ಯಗಳಲ್ಲಿ ಒಂದು ಸೌಂದರ್ಯವನ್ನಾಗಿ ಮಾಡಿದ್ದಾನೆ. ಮಾನವನು ಸಂಪತ್ತು ಗಳಿಸಲಿಕ್ಕಾಗಿ ಸತತ ಪರಿಶ್ರಮ ಪಡುತ್ತಾನೆ. ಅದೇ ವೇಳೆ ಇದೇ ಸಂಪತ್ತು ಅವನ ಪಾಲಿಗೆ ಪರೀಕ್ಷೆಯೂ ಆಗಿದೆ. ಅಲ್ಲಾಹ್ ಹೇಳುತ್ತಾನೆ,

﴿ زُيِّنَ لِلنَّاسِ حُبُّ ٱلشَّهَوَٰتِ مِنَ ٱلنِّسَآءِ وَٱلْبَنِينَ وَٱلْقَنَٰطِيرِ ٱلْمُقَنطَرَةِ مِنَ ٱلذَّهَبِ وَٱلْفِضَّةِ وَٱلْخَيْلِ ٱلْمُسَوَّمَةِ وَٱلْأَنْعَٰمِ وَٱلْحَرْثِ ۗ ذَٰلِكَ مَتَٰعُ ٱلْحَيَوٰةِ ٱلدُّنْيَا ۖ وَٱللَّهُ عِندَهُۥ حُسْنُ ٱلْمَـَٔابِ ﴿١٤﴾ ﴾ آل عمران: ١٤

“ಜನರಿಗೆ ಇಂದ್ರಿಯಾಸಕ್ತಿಗಳಾದ ಸ್ತ್ರೀಯರು, ಮಕ್ಕಳು, ಚಿನ್ನ–ಬೆಳ್ಳಿಗಳ ರಾಶಿ, ಆಯ್ದ ಕುದುರೆಗಳು, ಜಾನುವಾರುಗಳು ಮತ್ತು ಕೃಷಿ ಭೂಮಿ ಇವುಗಳನ್ನು ಅತ್ಯಾಕರ್ಷಕವಾಗಿ ಮಾಡಲಾಗಿದೆ. ಆದರೆ ಇವೆಲ್ಲ ಇಹಲೋಕದ ಕೆಲವೇ ದಿನಗಳ ಜೀವನ ಸಾಧನಗಳು. ಯಥಾರ್ಥದಲ್ಲಿ ಅತ್ಯುತ್ತಮ ವಾಸಸ್ಥಳವಂತೂ ಅಲ್ಲಾಹನ ಬಳಿಯಲ್ಲಿದೆ.” (ಪವಿತ್ರ ಕುರ್‌ಆನ್: 3: 14)

www.uzarfalahi.com

ಸಂಪತ್ತು ಗಳಿಸುವ ಈ ಮೋಹವು ಕೆಲವೊಮ್ಮೆ ಮಾನವನನ್ನು ಹಲಾಲ್ ಮೂಲಗಳನ್ನು ಬಿಟ್ಟು ಹರಾಮ್ ಮೂಲಗಳನ್ನು ಅನುಸರಿಸಲು ಪ್ರೇರೇಪಿಸುತ್ತದೆ. ಇದರ ಕಾರಣವಾಗಿ ಮಾನವನು ಐಶ್ವರ್ಯಾರಾಧಕನಾಗುತ್ತಾನೆ ಮತ್ತು ಸಂಪೂರ್ಣವಾಗಿ ಅದಕ್ಕೆ ಶರಣಾಗುತ್ತಾನೆ. ಕೆಲವೊಮ್ಮೆ ಮಾನವನು ತನ್ನ ಚಿತ್ತಾಕಾಂಕ್ಷೆಯ ಮೇಲೆ ನಿಯಂತ್ರಣ ಸಾಧಿಸುವಲ್ಲಿ ವಿಫಲನಾಗಿ, ತನ್ನ ಸಂಪತ್ತನ್ನು ಸ್ವಯಂ ತನ್ನ ಮತ್ತು ಇಡೀ ಸಮಾಜದ ನಾಶಕ್ಕೆ ಹೇತುವಾಗುವಂತಹ ಕಡೆಗಳಲ್ಲಿ ಖರ್ಚು ಮಾಡುತ್ತಾನೆ. ಆದ್ದರಿಂದಲೇ ಇಸ್ಲಾಮ್, ಸಂಪತ್ತನ್ನು ಗಳಿಸುವ ಮತ್ತು ಅದನ್ನು ಖರ್ಚು ಮಾಡುವ ಒಂದು ನೀತಿ–ನಿಯಮವನ್ನು ಮಾಡಿದೆ. ಮಾನವನು ತನ್ನ ಸಂಪತ್ತು ಮತ್ತು ಅದರ ಖರ್ಚಿಗೆ ಉತ್ತರದಾಯಿಯಾಗಿದ್ದಾನೆ ಎಂದು ಇಸ್ಲಾಮ್ ಸ್ಪಷ್ಟಪಡಿಸಿದೆ. ಅಷ್ಟೇ ಅಲ್ಲ, ಇಸ್ಲಾಮ್ ಪರಲೋಕಕ್ಕೆ ಎದುರಾಗಿ ಸಂಪತ್ತಿನ ಮೋಹ ಮತ್ತು ಅದರ ಕ್ಷೋಭೆಯಿಂದ ಮಾನವನನ್ನು ಎಚ್ಚರಿಸಿದೆ. ಇದು ಪ್ರವಾದಿವರ್ಯರ(ಸ) ಈ ಮಾತಿನಿಂದ ವ್ಯಕ್ತವಾಗುತ್ತದೆ,

"لاَ تَزُولُ قَدَمَا عَبْدٍ يَوْمَ الْقِيَامَةِ حَتَّى يُسْأَلَ عَنْ عُمُرِهِ فِيمَا أَفْنَاهُ ، وَعَنْ عِلْمِهِ مَا فَعَلَ بِهِ ، وَعَنْ مَالِهِ مِنْ أَيْنَ اكْتَسَبَهُ وَفِيمَا أَنْفَقَهُ ، وَعَنْ جِسْمِهِ فِيمَا أَبْلاَهُ " (الترمذي)

“ಪುನರುತ್ಥಾನದಂದು ಒಬ್ಬನಲ್ಲಿ ನಿನ್ನ ಆಯಸ್ಸನ್ನು ಯಾವ ವಿಷಯದಲ್ಲಿ ವ್ಯಯಿಸಿದೆ, ನೀನು ಗಳಿಸಿದ ವಿದ್ಯೆಯನ್ನು ಎಷ್ಟಂಶ ಅನುಸರಿಸಿದೆ, ಸಂಪತ್ತು ಎಲ್ಲಿಂದ ಗಳಿಸಿದೆ ಮತ್ತು ಎಲ್ಲಿ ವ್ಯಯಿಸಿದೆ, ನಿನ್ನ ದೇಹವನ್ನು ಯಾವ ಕಾರ್ಯದಲ್ಲಿ ತೊಡಗಿಸಿಕೊಂಡೆ ಎಂದು ವಿಚಾರಿಸುವ ವರೆಗೆ ಅವನ ಹೆಜ್ಜೆಯು ದೇವ ಸನ್ನಿಧಿಯಿಂದ ಕದಲಲಾರದು.” (ತಿರ್ಮಿದಿ)

ಅಲ್ಲಾಹ್ ಹೇಳುತ್ತಾನೆ,

﴿ يَـٰٓأَيُّهَا ٱلَّذِينَ ءَامَنُوا۟ لَا تُلْهِكُمْ أَمْوَٰلُكُمْ وَلَآ أَوْلَـٰدُكُمْ عَن ذِكْرِ ٱللَّهِ ۚ وَمَن يَفْعَلْ ذَٰلِكَ فَأُو۟لَـٰٓئِكَ هُمُ ٱلْخَـٰسِرُونَ ﴿٩﴾ ﴾ المنافقون: ٩

“ಸತ್ಯವಿಶ್ವಾಸಿಗಳೇ, ನಿಮ್ಮ ಸಂಪತ್ತು ಮತ್ತು ನಿಮ್ಮ ಸಂತಾನಗಳು ನಿಮ್ಮನ್ನು ಅಲ್ಲಾಹನ ಸ್ಮರಣೆಯಿಂದ ಅಲಕ್ಷ್ಯಗೊಳಿಸದಿರಲಿ. ಹೀಗೆ ಮಾಡುವವರೇ ನಷ್ಟ ಅನುಭವಿಸುವವರು.” (ಪವಿತ್ರ ಕುರ್‌ಆನ್: 63: 9)

ಇನ್ನೊಂದೆಡೆ ಅಲ್ಲಾಹ್ ಹೇಳುತ್ತಾನೆ,

﴿ إِنَّمَآ أَمۡوَٰلُكُمۡ وَأَوۡلَٰدُكُمۡ فِتۡنَةٞۚ وَٱللَّهُ عِندَهُۥٓ أَجۡرٌ عَظِيمٞ ١٥ ﴾ التغابن: ١٥

“ನಿಮ್ಮ ಸಂಪತ್ತು ಮತ್ತು ಸಂತತಿಗಳು ಒಂದು ಪರೀಕ್ಷೆಯಾಗಿದೆ. ಅತ್ಯುನ್ನತ ಪ್ರತಿಫಲವಂತೂ ಅಲ್ಲಾಹನ ಬಳಿಯಲ್ಲೇ ಇದೆ.” (ಪವಿತ್ರ ಕುರ್‌ಆನ್: 64: 15)

ಸಂಪತ್ತಿಗೆ ಸಂಬಂಧಿಸಿ ಮುಸ್ಲಿಮನೊಬ್ಬನು ಅರಿತಿರಬೇಕಾದ ಕೆಲವು ವಿಷಯಗಳು ಈ ರೀತಿ ಇವೆ:

1. ಈ ಜಗತ್ತಿನಲ್ಲಿ ಇರುವ ಇತರ ವಸ್ತುಗಳಂತೆಯೇ ಸಂಪತ್ತು ಕೂಡ ಅಲ್ಲಾಹನ ಸೊತ್ತಾಗಿದೆ.

2. ಇದು ಮಾನವನ ಬಳಿ ಅಲ್ಲಾಹನ ಅಮಾನತ್ ಆಗಿದೆ. ಅವನು ಸಂಪತ್ತನ್ನು ಉತ್ತಮ ಕಡೆಗಳಲ್ಲಿ ಖರ್ಚು ಮಾಡಿದರೆ ಅವನಿಗೆ ಅತ್ಯುತ್ತಮ ಪ್ರತಿಫಲವಿದೆ. ಅಂತೆಯೇ ಅವನು ಅದನ್ನು ಬೇಕಾಬಿಟ್ಟಿಯಾಗಿ ಖರ್ಚು ಮಾಡಿದರೆ ಅದರ ಲೆಕ್ಕಗಳನ್ನು ಅಲ್ಲಾಹನ ಮುಂದೆ ಸಮರ್ಪಿಸಬೇಕಾಗುವುದು.

3. ಸಂಪತ್ತು ಗೌರವಯುತ ಜೀವನ ಬಾಳಲಿಕ್ಕಿರುವ ಒಂದು ಮಾಧ್ಯಮವಾಗಿದೆಯೇ ಹೊರತು ಅದುವೇ ಜೀವನದ ಉದ್ದೇಶವಲ್ಲ. ಅದನ್ನು ಗಳಿಸಲು ಮಾನವನು ಸದಾ ಪರಿಶ್ರಮ ಪಡುತ್ತಾನೆ ಮತ್ತು ತನ್ನ ಆಯಸ್ಸಿನ ಹೆಚ್ಚಿನ ಭಾಗವನ್ನು ಅದಕ್ಕಾಗಿ ವ್ಯಯಿಸುತ್ತಾನೆ. ನೈಜ ಮುಸ್ಲಿಮನು ಸಂಪತ್ತಿನ ಮಹತ್ವದಿಂದ ಅಲಕ್ಷ್ಯನಾಗಿರುವುದಿಲ್ಲ. ಇದೇ ಕಾರಣದಿಂದ ಅವನು ಕೇವಲ ಹಲಾಲ್ ಮೂಲಗಳಿಂದ ಸಂಪತ್ತು ಗಳಿಸುತ್ತಾನೆ ಮತ್ತು ಕೇವಲ ಅಲ್ಲಾಹನಿಗೆ ಇಷ್ಟವಿರುವ ಕಾರ್ಯಗಳಲ್ಲಿ ಖರ್ಚು ಮಾಡುತ್ತಾನೆ.

4. ಮಾನವನು ಹಲಾಲ್ ಮೂಲಗಳಿಂದ ಗಳಿಸಿದ ಸಂಪತ್ತು ಅವನ ಒಡೆತನದ್ದಾಗಿರುತ್ತದೆ. ಅದನ್ನು ಸಂರಕ್ಷಿಸಬೇಕಾದುದು ಅವನ ಕರ್ತವ್ಯವಾಗಿದೆ ಮತ್ತು ಇನ್ನೊಬ್ಬನಿಗೆ ಅದನ್ನು ಕಬಳಿಸುವ ಹಕ್ಕು ಇಲ್ಲ.

ಈ ಮೇಲಿನ ನೀತಿ–ನಿಯಮಗಳ ಆಧಾರದಲ್ಲಿ ಮಾನವನಿಗೆ ತನ್ನ ಹಲಾಲ್ ಮೂಲಗಳಿಂದ ಗಳಿಸಿದ ಸಂಪತ್ತನ್ನು ಖರ್ಚು ಮಾಡುವ ಸಂಪೂರ್ಣ ಹಕ್ಕಿದೆ. ಆದರೆ ಅದರ ಮೇಲೆ ಕೆಲವು ಹಕ್ಕುಗಳೂ ಇವೆ.

* * * * *

www.uzaifaldhi.com